UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Wednesday
04-11-2026

ವಿ ರೈತ ಮಿತ್ರ



■ಕರಿಮೆಣಸಿನಲ್ಲಿ ಬೇರಿನ ಹಿಟ್ಟು ತಿಗಣೆ ಹಾವಳಿ ಹೆಚ್ಚಾಗಿದ್ದು, ನಿರ್ವಹಣೆ ಹೇಗೆ?

| ಲೀಲಾವತಿ ಉಡುಪಿ

ಕರಿಮೆಣಸಿನಲ್ಲಿ ಬೇರಿನ ಹಿಟ್ಟು ತಿಗಣೆ ಕಂಡುಬಂದಲ್ಲಿ ಗಿಡಗಳ ಮೇಲೆ ಬಿಳಿ ಬಣ್ಣದ ಹತ್ತಿಯಂತಹ ಮೇಣದ ಪದರದಂತೆ ಬಿಳಿ ತಿಗಣೆಗಳ ಗುಂಪು ಕಂಡುಬರುತ್ತದೆ ಮತ್ತು ಇವುಗಳು ಬೇರುಗಳಿಂದ ರಸವನ್ನು ಹೀರುವುದರಿಂದ ಬಾಧೆಗೊಳಗಾದ ಬಳ್ಳಿಗಳ ಎಲೆಗಳು ಹಳದಿಯಾಗುತ್ತವೆ. ಇದರಿಂದ ಬಳ್ಳಿಗಳು ಬಾಡಿದಂತಾಗಿ ಕ್ರಮೇಣ ಹಾವಳಿ ಹೆಚ್ಚಾದ್ದಲ್ಲಿ ಗಿಡ ಪೂರ್ತಿಯಾಗಿ ಒಣಗುತ್ತದೆ. ಆದ್ದರಿಂದ ಸಸ್ಯದ ಬೆಳವಣಿಗೆ ಕುಂಠಿತವಾಗಿ ಇಳುವರಿ ಕಡಿಮೆಯಾಗುತ್ತದೆ. ಕಾಳುಮೆಣಸಿನಲ್ಲಿ ಬೇರು ಹಿಟ್ಟು ತಿಗಣೆ ಬಾಧೆಯನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಿ, ಸೂಕ್ತ ಸಮಗ್ರ ನಿರ್ವಹಣಾ ಕ್ರಮಗಳನ್ನು ಅನುಸರಿಸುವುದರಿಂದ ಬೆಳೆ ಹಾನಿಯನ್ನು ಕಡಿಮೆ ಮಾಡಬಹುದು.

ನಿರ್ವಹಣೆ: ತೋಟದಲ್ಲಿನ ಕಳೆಗಳನ್ನು ನಿಯಂತ್ರಿಸುವುದು. ಸೂಕ್ತ ಬಸಿಗಾಲುವೆ ವ್ಯವಸ್ಥೆ ಮಾಡುವುದು. ತೀವ್ರವಾಗಿ ಬಾಧಿತಗೊಂಡ ಸಸಿಗಳನ್ನು ಕಿತ್ತು ನಾಶ ಪಡಿಸುವುದು ಮತ್ತು ಅವುಗಳ ಮಣ್ಣನ್ನು ಇತರ ಸಸಿಗಳಿಗೆ ಬಳಸುವುದನ್ನು ತಡೆಯುವುದು. ಗೊಬ್ಬರದ ಜತೆ ಬೇವಿನ ಹಿಂಡಿ ಬಳಸುವುದು ಸೂಕ್ತ. ಅವಶ್ಯವಿದ್ದಲ್ಲಿ ಪ್ರತಿ ಲೀಟರ್ ನೀರಿಗೆ ಇಮಿಡಾಕ್ಲೋಪ್ರಿಡ್ 17.8 ಎಸ್.ಎಲ್. 0.5 ಮಿ.ಲೀ. ಅಥವಾ ಡೈಮಿಥೋಯೇಟ್ 30 ಇ.ಸಿ. 2 ಮಿ.ಲೀ.ನಂತೆ ಮಿಶ್ರಣ ಮಾಡಿ ನಿಧಾನವಾಗಿ ಪ್ರತಿ ಗಿಡದ ಬುಡದ ಭಾಗಕ್ಕೆ ಬೇರುಗಳು ನೆನೆಯುವಂತೆ 3ರಿಂದ 5 ಲೀಟರ್‌ನಷ್ಟು ಸುರಿಯಬೇಕು.

| **ಡಾ. ಪ್ರಮಿಳಾ ಸಿ.ಕೆ.** ಸಹಾಯಕ ಪ್ರಾಧ್ಯಾಪಕರು, ಬೀಜ ವಿಜ್ಞಾನ

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ

Vijayavani pg 03

ಭೂಗರ್ಭಜಲಕ್ಕೆ ಹೊಸ ಆಭರಣ ಪುನಃಭರಣ

ಕೇಂದ್ರ ಜಲಶಕ್ತಿ ಸಚಿವಾಲಯದಿಂದ ಪುನಃ ಭರಣ ಮೊಬೈಲ್ ಆ್ಯಪ್

ಸುದ್ದಿ ಸಮಗ್ರ



ದೇಶಾದ್ಯಂತ ತೀವ್ರವಾಗಿ ಕುಸಿಯುತ್ತಿರುವ ಅಂತರ್ಜಲ ಮಟ್ಟವನ್ನು ನಿಯಂತ್ರಿಸಲು ಹಾಗೂ ಸೂಕ್ತ ಕೃತಕ ಮರುಪೂರಣ ತಾಣಗಳನ್ನು ವೈಜ್ಞಾನಿಕವಾಗಿ ಪತ್ತೆಹಚ್ಚಲು ನೆರವಾಗುವ ಅತ್ಯಾಧುನಿಕ ಜಿಯೋಸ್ಪೇಷಿಯಲ್ ಮೊಬೈಲ್ ಅಪ್ಲಿಕೇಷನ್ 'ಪುನಃ ಭರಣ'ವನ್ನು ಕೇಂದ್ರ ಜಲಶಕ್ತಿ ಸಚಿವಾಲಯ ಅಧಿಕೃತವಾಗಿ ಬಿಡುಗಡೆ ಮಾಡಿದೆ.ಏನಿದು ಪುನಃಭರಣ? ಈ ಆ್ಯಪ್ ಅಂತರ್ಜಲ ಮಟ್ಟವನ್ನು ನಿಯಂತ್ರಿಸಲು ಹೇಗೆ ಸಹಕಾರಿ ಎಂಬಿತ್ಯಾದಿ ವಿಚಾರಗಳ ಬಗ್ಗೆ ಮಾಹಿತಿ ಇಲ್ಲಿದೆ.

ಬಾಹ್ಯಾಕಾಶದಿಂದ ಭೂಗರ್ಭದತ್ತ

ಇತ್ತೀಚೆಗೆ ಲೋಕಾರ್ಪಣೆಗೊಂಡ ಈ ಮೊಬೈಲ್ ಅಪ್ಲಿಕೇಶನ್, ಉಪಗ್ರಹ ತಂತ್ರಜ್ಞಾನ ಮತ್ತು ಜಲವಿಜ್ಞಾನದ ಯೋಜನಾ ಪ್ರಕ್ರಿಯೆಯನ್ನು ಸಂಯೋಜಿಸುವ ಮಹತ್ವಾಕಾಂಕ್ಷೆಯ ಹೆಜ್ಜೆಯೆನಿಸಿದೆ. ಭಾಸ್ಕರಾಚಾರ್ಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಸ್ಪೇಸ್ ಅಪ್ಲಿಕೇಷನ್ಸ್ ಆ್ಯಂಡ್ ಜಿಯೋ-ಇನ್ಫರ್ಮ್ಯಾಟಿಕ್ಸ್ (ಬಿಐಎಸ್‌ಎಜಿ-ಎನ್) ಮತ್ತು ರಾಷ್ಟ್ರೀಯ ಜಲ ಮಿಷನ್ (ಎನ್‌ಡಬ್ಲ್ಯುಎಂ) ಜಂಟಿಯಾಗಿ ಈ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿವೆ.

ದತ್ತಾಂಶಗಳ ಸಂಗಮ

ಕೇವಲ ಮಳೆಯ ಪ್ರಮಾಣವನ್ನೇ ಎಣಿಕೆ ಮಾನದಂಡವಾಗಿ ಪರಿಗಣಿಸದೆ, ಈ ವೇದಿಕೆ, 5 ಪ್ರಮುಖ ಭೌಗೋಳಿಕ ಅಂಶಗಳನ್ನು ಒಟ್ಟಾಗಿ ವಿಶ್ಲೇಷಿಸುತ್ತದೆ. ಮಳೆಯ ಮಾದರಿ, ಪ್ರಾದೇಶಿಕ ಅಂತರ್ಜಲ ಮಟ್ಟ, ಜಲಚರ ಸ್ತರಗಳ ಇಳುವರಿ ಸಾಮರ್ಥ್ಯ, ಭೂಮಿಯ ಮೇಲ್ಪೈ ಇಳಿಜಾರು ಮತ್ತು ನೈಸರ್ಗಿಕ ಜಲಾನಯನ ಹರಿವಿನ ಜಾಲಗಳನ್ನು ಇದು ಪರಿಶೀಲಿಸುತ್ತದೆ. ಈ ಎಲ್ಲಾ ಭೌತಿಕ ಪದರಗಳನ್ನು ಒಟ್ಟಿಗೆ ತುಲನೆ ಮಾಡುವುದರಿಂದ ಸ್ಥಳೀಯ ಭೂಪ್ರದೇಶದ ಸಮಗ್ರ ಚಿತ್ರಣ ಸಿಗುತ್ತದೆ. ಉತ್ತಮ ಮಳೆಯಾಗಿದ್ದರೂ ನೆಲದ ಇಳಿಜಾರು ಕಡಿದಾಗಿದ್ದರೆ ನೀರು ಇಂಗದೆ ಮೇಲ್ಪೈಯಲ್ಲೇ ಹರಿದು ವ್ಯರ್ಥವಾಗುವ ಸಾಧ್ಯತೆಯಿರುತ್ತದೆ. ಆದರಿಂದ ಜಲವಿಜ್ಞಾನ ಸಂಬಂಧಿತ ನಿದರಗಳು ಭೂಮಿಯ ಒಳಗಿನ ನೀರಿನ ಸಡಿಲಿಕೆಯನ್ನು ತಿಳಿಯಲು ನೆರವಾಗುತ್ತವೆ.



ಉಪಯುಕ್ತ ಮಾರ್ಗದರ್ಶನ

ಈ ವೇದಿಕೆ, 3 ಕಿಲೋಮೀಟರ್ ವ್ಯಾಪ್ತಿಯೊಳಗೆ ಲಭ್ಯವಿರುವ ಉಪಗ್ರಹ ದತ್ತಾಂಶಗಳನ್ನು ಆಧರಿಸಿ ಕೃತಕ ಮರುಪೂರಣಕ್ಕೆ ಸೂಕ್ತವಾದ ಪ್ರದೇಶಗಳನ್ನು ನಿಖರವಾಗಿ ಗುರುತಿಸುತ್ತದೆ. ಇದರೊಂದಿಗೆ ಸದ್ಯದಪಡಿಸಲಾಗಿರುವ ಜಾಲಕಾರಾವು ಗ್ರಾಮ ಮಟ್ಟದ ಕೃತಕ ಮರುಪೂರಣ ರಚನೆಗಳ (ಎಆರ್ ಎಸ್) ವಲಯ ನಕ್ಷೆಗಳು ಮತ್ತು ಭೌಗೋಳಿಕ ಮಾಹಿತಿ ವ್ಯವಸ್ಥೆಯ (ಜಿಐಎಸ್) ಪರಿಕರಗಳನ್ನು ಒದಗಿಸುವ ಮೂಲಕ ಸ್ಥಳೀಯ ಆಡಳಿತಗಳಿಗೆ ಉಪಯುಕ್ತ ಮಾರ್ಗದರ್ಶನ ನೀಡುತ್ತದೆ.

ಅಕ್ವಿಫರ್ ಮತ್ತು ಮರುಪೂರಣ

ಅಂತರ್ಜಲ ಸಂರಕ್ಷಣೆ ಫಲಪ್ರದವಾಗಬೇಕಾದರೆ ಭೂಗರ್ಭದ ಶಿಲಾರಚನೆಯನ್ನು ಅರ್ಥಮಾಡಿಕೊಳ್ಳುವುದು ಅತ್ಯಗತ್ಯ. ಯುನೈಟೆಡ್ ಸ್ಟೇಟ್ಸ್ ಜಿಯಾಲಾಜಿಕಲ್ ಸರ್ವೆ (ಯುಎಸ್‌ಜಿಎಸ್) ವಿವರಿಸುವಂತೆ, ಅಂತರ್ಜಲ ಭೂಮಿಯ ಕೆಳಗೆ ನಿರಂತರವಾಗಿ ಹರಿಯುವ ದೊಡ್ಡ ಸರೋವರವಲ್ಲ, ಬದಲಾಗಿ ಅದು ಮಣ್ಣು ಮತ್ತು ಬಂಡೆಗಳ ರಂಧ್ರಗಳು ಹಾಗೂ ಬಿರುಕುಗಳಲ್ಲಿ ಅಡಗಿರುವ ಅಕ್ವಿಫರ್ ಎಂಬ ಜಲಚರ ಸ್ತರಗಳಲ್ಲಿ ಸಂಗ್ರಹವಾಗಿರುತ್ತದೆ. ಈ ಶಿಲಾಸ್ತರಗಳ ರಂಧ್ರತೆ ಮತ್ತು ನೀರು ನುಸುಳುವಿಕೆ ಸಾಮರ್ಥ್ಯವು ಮರುಪೂರಣದ ಗತಿಯನ್ನು ನಿರ್ಧರಿಸುತ್ತದೆ. ನೈಸರ್ಗಿಕ ಮರುಪೂರಣ ಪರಿಸ್ಥಿತಿಗಳನ್ನು ವೈಜ್ಞಾನಿಕವಾಗಿ ಮಾರ್ಪಡಿಸಿ, ಮಳೆನೀರನ್ನು ಸೂಕ್ತ ಭೂಸ್ತರಗಳಿಗೆ ಕಲುಪಿಸುವುದು ಕೃತಕ ಮರುಪೂರಣದ ಮುಖ್ಯ ಉದ್ದೇಶ, ಎಂದು ಕೇಂದ್ರ ಅಂತರ್ಜಲ ಮಂಡಳಿ (ಸಿಜಿಡಬ್ಲ್ಯುಬಿ) ಸ್ಪಷ್ಟಪಡಿಸಿದೆ. ಜಲಮೂಲದ ಸ್ವಚ್ಛತೆ ಮತ್ತು ಜೈವಿಕ ಕುದ್ದತೆಯೂ ಇಲ್ಲಿ ಅಷ್ಟೇ ಮುಖ್ಯವಾಗುತ್ತದೆ.

ಇಲಾಖಾ ಸಹಭಾಗಿತ್ವದ ಮುನ್ನಡೆ

ಈ ಯೋಜನೆಯ ಯಶಸ್ಸು ವಿವಿಧ ಸಂಸ್ಥೆಗಳ ಪರಸ್ಪರ ಸಮನ್ವಯತೆಯ ಮೇಲೆ ನಿಂತಿದೆ. ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಅಡಿಯಲ್ಲಿ ಸ್ವಾಯತ್ತ ಸಂಸ್ಥೆಯಾಗಿರುವ ಬಿಐಎಸ್‌ಎಜಿ-ಎನ್ ತಾಂತ್ರಿಕ ಹಾಗೂ ತಂತ್ರಾಂಶ ನಿರ್ವಹಣೆಯನ್ನು ನೋಡಿಕೊಳ್ಳುತ್ತದೆ. ಜಲಶಕ್ತಿ ಸಚಿವಾಲಯದ ಜಲಸಂಪನ್ಮೂಲ, ನದಿ ಅಭಿವೃದ್ಧಿ ಮತ್ತು ಗಂಗಾ ಪುನರುಜ್ಜೀವನ ಇಲಾಖೆ, ರಾಷ್ಟ್ರೀಯ ಜಲ ಮಿಷನ್ ಈ ಯೋಜನೆಯನ್ನು ನೀತಿ ನಿರೂಪಣೆಗೆ ಜೋಡಿಸುತ್ತದೆ.

ಪ್ರಮುಖ ಮರುಪೂರಣದ ಸೂತ್ರಗಳು

- ಮಳೆ ಪ್ರಮಾಣ: ಪ್ರಾದೇಶಿಕ ಮಳೆಯ ಪ್ರವೃತ್ತಿಯನ್ನು ಅಳೆಯುತ್ತದೆ.
- ಅಂತರ್ಜಲ ಮಟ್ಟ: ಪ್ರಸ್ತುತ ಲಭ್ಯವಿರುವ ಭೂಗತ ನೀರಿನ ಸ್ಥಿತಿಯನ್ನು ತೋರಿಸುತ್ತದೆ.
- ಜಲಚರ ಇಳುವರಿ: ಶಿಲಾಸ್ತರಗಳ ನೀರು ಸಾಗಿಸುವ ಸಾಮರ್ಥ್ಯ ನಿರ್ಣಯಿಸುತ್ತದೆ.
- ಭೂ ಮೇಲ್ಪೈ ಇಳಿಜಾರು: ನೀರು ಹರಿದುಹೋಗುವ ನೈಸರ್ಗಿಕ ಇಳಿಜಾರನ್ನು ಗುರುತಿಸುತ್ತದೆ.
- ಒಳಚರಂಡಿ ಜಾಲ: ಪ್ರಾದೇಶಿಕ ಮೇಲ್ಪೈ ನೀರಿನ ಹರಿವಿನ ನಕ್ಷೆ ಮಾಡುತ್ತದೆ.

ಕೆರೆ-ಬಾವಿಗಳ ಪುನಶ್ಚೇತನಕ್ಕೆ ಸಹಕಾರಿ

ಕೇಂದ್ರ ಸರ್ಕಾರದ 'ಜಲ ಜೀವನ್ ಮಿಷನ್' ಮತ್ತು 'ಅಟಲ್ ಭೂಜಲ್ ಯೋಜನೆ'ಗಳ ಯಶಸ್ಸಿಗೆ ಈ ತಂತ್ರಜ್ಞಾನ ಪೂರಕವಾಗಿದ್ದು, ಗ್ರಾಮೀಣ ಪಂಚಾಯತಿಗಳು ನೀರಿನ ದುಂದುವೆಚ್ಚ ತಡೆದು, ಸಮುದಾಯ ಸಹಭಾಗಿತ್ವದೊಂದಿಗೆ ಸ್ಥಳೀಯ ಕೆರೆ-ಬಾವಿಗಳ ಪುನಶ್ಚೇತನಕ್ಕೆ ವೈಜ್ಞಾನಿಕವಾಗಿ ಮುನ್ನಡೆಯಲು ನೆರವಾಗುತ್ತದೆ. ಒಟ್ಟಾರೆಯಲ್ಲಿ, ಕೇವಲ ನೀರನ್ನು ಇಂಗಿಸುವುದರಿಂದಲೇ ನೀರಿನ ಬಿಕ್ಕಟ್ಟು ತೀರದು. ಮಿತವ್ಯಯದ ಬಳಕೆ, ದಕ್ಷ ನಿರ್ವಹಣೆ ಹಾಗೂ ನೀರಿನ ದುಂದುವೆಚ್ಚ ತಡೆಯುವ ಪ್ರಯತ್ನಗಳು ಒಟ್ಟಾಗಿ ಸಾಗಿದಾಗ ಮಾತ್ರ ಜಲಸುರಕ್ಷತೆ ಸಾಧ್ಯ.

ನಕ್ಷೆ, ವಾಸ್ತವದ ನಡುವಿನ ಅಂತರ

ಆಪ್ಲಿಕೇಶನ್ ಒದಗಿಸುವ 3 ಕಿಲೋಮೀಟರ್ ಪರಿಶೋಧನಾ ವ್ಯಾಪ್ತಿ, ನೆರೆಹೊರೆಯ ಸಾಧ್ಯತೆಗಳನ್ನು ಹುಡುಕಲು ನೆರವಾಗುವ ಸಾಧನವೇ ಹೊರತು, ಸುತ್ತಮುತ್ತಲಿನ ಪ್ರತಿಯೊಂದು ಕೊಳವೆಬಾವಿಗೂ ತಕ್ಷಣವೇ ನೀರು ಸಿಗುತ್ತದೆ ಎಂಬ ಭರವಸೆಯಲ್ಲ. ಕಲವೇ ಮೀಟರ್‌ಗಳ ಅಂತರದಲ್ಲಿ ಭೂಗರ್ಭದ ಶಿಲಾರಚನೆ ಬದಲಾಗಬಹುದು. ಆದ್ದರಿಂದ ಜಿಯೋಫಿಸಿಕಲ್ ಮತ್ತು ಹೈಡ್ರಾಲಾಜಿಕಲ್ ಪರಿಶೀಲನೆಗಳು ಅನಿವಾರ್ಯ.

Hosadiganta pg 06

ಹಸಿರು ಗೊಬ್ಬರ ಮಹತ್ವ ಅರಿಯಲಿ



• ದೊಡ್ಡಬಳ್ಳಾಪುರ: ಮಣ್ಣಿನ ಆರೋಗ್ಯ ಪತ್ರದ ಪ್ರಾಮುಖ್ಯತೆ, ಮಣ್ಣಿನ ಫಲವತ್ತತೆ ಕಾಪಾಡುವಲ್ಲಿ ಹಸಿರೆಲೆ ಗೊಬ್ಬರದ ಬಳಕೆಯ ಮಹತ್ವ ಅರಿಯಬೇಕಾಗಿದೆ ಎಂದು ಕೃಷಿ ವಿಜ್ಞಾನ ಕೇಂದ್ರದ ಮಣ್ಣು ವಿಜ್ಞಾನಿ ಡಾ.ಡಿ.ಬಾಲಾಜಿನಾಯಕ್ ತಿಳಿಸಿದರು. ತಾಲೂಕಿನ ಚನ್ನಾದೇವಿ ಅಗ್ರಹಾರ ಗ್ರಾಮದಲ್ಲಿ 'ಕೃಷಿ ಭೂಮಿ ಉಳಿಸಿ ಅಭಿಯಾನ-2.0 ಕಾರ್ಯಕ್ರಮದ ಅಡಿಯಲ್ಲಿ ಜೈವಿಕ ಗೊಬ್ಬರಗಳ ಮಹತ್ವದ ಬಗ್ಗೆ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿ, ಮಣ್ಣಿನ ಪೋಷಕಾಂಶ ನಿರ್ವಹಣೆ ಹಾಗೂ ರಾಗಿ, ಜೋಳ ಮತ್ತು ತೊಗರಿ ಬೆಳೆಗಳಲ್ಲಿ ರೈಜೋಬಿಯಂ ಮತ್ತು ಅಜೋಸ್ಪಿರಿಲ್ಲಂಗಳಿಂದ ಬೀಜೋಪಚಾರದ ಬಗ್ಗೆ ತಿಳಿಸಿದರು. ವಿಜ್ಞಾನಿ ಡಾ. ವಾಣಿ ಶ್ರೀ ರೋಗ ಮತ್ತು ಕೀಟ ಬಾಧೆ ತಡೆಯಲು ಬೀಜೋಪಚಾರ ಮಾಡಬೇಕೆಂದು ತಿಳಿಸಿದರು. ಡಾ. ಉದಯ ಭಾಸ್ಕರ್ ಮಾತನಾಡಿ, ಪರಿಸರ ಸ್ನೇಹಿ ಜೈವಿಕ ಕೀಟನಾಶಕಗಳ ಬಳಕೆ ಹಾಗೂ ಅವುಗಳ ಉಪಯೋಗಗಳ ಕುರಿತು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಕೃಷಿ ಇಲಾಖೆಯ ಆತ್ಮ ಯೋಜನೆಯ ಸಿಬ್ಬಂದಿಯಾದ ಗಗನಾ, ರೈತ ಮತ್ತು ರೈತ ಮಹಿಳೆಯರು ಸಕ್ರಿಯವಾಗಿ ಭಾಗವಹಿಸಿ ಸದುಪಯೋಗ ಪಡೆದುಕೊಂಡರು. ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯ ವಿಜ್ಞಾನಿ ಡಾ. ಮಮತಾ ಬೀಜಗಳ ಮೊಳಕೆ ಸಾಮರ್ಥ್ಯ ಪರೀಕ್ಷೆ ಹಾಗೂ ವಿವಿಧ ಬೆಳೆಗಳ ಸುಧಾರಿತ ತಳಿಗಳ ಬಗ್ಗೆ ಮಾಹಿತಿ ನೀಡಿದರು.

ಕೃಷಿ ಭೂಮಿ ಉಳಿಸಿ ಅಭಿಯಾನ-2.0 ಕಾರ್ಯಕ್ರಮ

Hosadiganta pg 07

Advertorial

ಕೃಷಿ ಉತ್ಪನ್ನಗಳನ್ನು ಯಶಸ್ವಿಯಾಗಿ ಬೆಳೆದರೂ, ಜಾಗತಿಕ ಮೌಲ್ಯ ಒದಗಿಸಿ ಲಾಭದಾಯಕ ಉತ್ಪನ್ನಗಳಾಗಿ ರೂಪಿಸುವಲ್ಲಿ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮ ನಿಯಮಿತ (ಕೆಪೆಕ್) ರೈತರಿಗೆ ಬೆನ್ನೆಲುಬಾಗಿ ನಿಂತಿದೆ. ಕಳೆದ 3 ದಶಕಗಳಲ್ಲಿ ಅಂತಹ ಉತ್ಪನ್ನಗಳನ್ನು ರಫ್ತು ಮಾಡುವ ಮೂಲಕ ಜಾಗತಿಕ ಆಹಾರ ಉದ್ಯಮದಲ್ಲಿ ಸದ್ದು ಮಾಡುತ್ತಿದೆ.

ಆಹಾರೋದ್ಯಮದಲ್ಲಿ ಕೆಪೆಕ್ ಕ್ರಾಂತಿ

ರೈತರನ್ನು ಕೃಷಿ ಉದ್ಯಮಿಗಳನ್ನಾಗಿ ಪರಿವರ್ತಿಸಲು ಆರ್ಥಿಕ ಮತ್ತು ತಾಂತ್ರಿಕ ನೆರವು ನೀಡುತ್ತಾ, ಮೂಲಸೌಕರ್ಯ ಅಭಿವೃದ್ಧಿ ಕೋಲ್ಡ್ ಸ್ಟೋರೇಜ್ (ಶೀತಲಗೃಹ) ಸೌಲಭ್ಯ, ಶ್ರೇಣೀಕರಣ, ಸಂಸ್ಕರಣಾ ಘಟಕಗಳ ಸ್ಥಾಪನೆ ಮತ್ತು ಪ್ಯಾಕಿಂಗ್ ವ್ಯವಸ್ಥೆಯನ್ನು ಬಲಪಡಿಸಲು ಶ್ರಮಿಸುತ್ತಿರುವ ಕೆಪೆಕ್, ರೈತರು ಹಾಗೂ ಕಿರು ಉದ್ಯಮಿಗಳ ಆಪತ್ಬಾಂಧವ ಎನಿಸಿದೆ.

ರೈತರು ಬೆಳೆದ ಬೆಳೆಗಳನ್ನು ಸಂಸ್ಕರಿಸಿ, ಅವುಗಳನ್ನು ಪತ್ಯೇಕ ಬ್ರಾಂಡ್ ಆಗಿ ಮಾರ್ಪಡಿಸಿ ಮಾರುಕಟ್ಟೆಗೆ ತರುವುದು ಕೆಪೆಕ್‌ನ ಪ್ರಮುಖ ಧ್ಯೇಯ. ಈ ಗುರಿ ಸಾಧನೆಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಸಂಯುಕ್ತವಾಗಿ ಬೆಂಬಲ ನೀಡುತ್ತಿರುವುದು ವಿಶೇಷ. ಇಂತಹ ಮಹತ್ವದ ಉದ್ದೇಶಕ್ಕಾಗಿಯೇ ಪ್ರಧಾನಮಂತ್ರಿಗೆ ಕಿರು ಆಹಾರ ಸಂಸ್ಕರಣಾ ಉದ್ಯಮಿಗಳ ನಿಯಮಬದ್ಧಗೊಳಿಸಿಕೆ ಯೋಜನೆ (ಪಿಎಂಎಫ್‌ಎಂಇ) ಜಾರಿಗೊಳಿಸಲಾಗಿದೆ. ಇದು ರೈತರು ಮತ್ತು ಕಿರು ಆಹಾರ ಉದ್ಯಮಿದಾರರ ಮನ್ನಣೆ ಗಳಿದ ಯೋಜನೆಯಾಗಿದೆ. ಕೆಪೆಕ್ ಈ ಯೋಜನೆಯ ಅನುಷ್ಠಾನದಲ್ಲಿ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದೆ. ರಫ್ತು ಉತ್ತೇಜನ ಚಟುವಟಿಕೆಗಳು ಮತ್ತು ಮಾರುಕಟ್ಟೆ ವಿಸ್ತರಣೆಗೆ ಮಾರ್ಗದರ್ಶನ ಹಾಗೂ ಆರ್ಥಿಕ ನೆರವು ನೀಡುತ್ತಿದೆ.

ಕೆಪೆಕ್, ಕೃಷಿ ಕ್ಷೇತ್ರದಲ್ಲಿ ಪ್ರಮುಖ ಪಾತ್ರ ವಹಿಸುವ ರಾಜ್ಯ ಸರಕಾರದ ಸಂಸ್ಥೆಯಾದಿದ್ದು 1996ರಲ್ಲಿ ಸ್ಥಾಪನೆಯಾದ ಈ ಸಂಸ್ಥೆಯ ಮುಖ್ಯ ಉದ್ದೇಶ ರಾಜ್ಯದ ರೈತರು ಬೆಳೆದ ಕೃಷಿ, ತೋಟಗಾರಿಕೆ ಮತ್ತು ಪಾರಿಸಿ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಕಲ್ಪಿಸುವುದು, ಸಂಸ್ಕರಣೆಗೆ ಉತ್ತೇಜನ ನೀಡುವುದು ಹಾಗೂ ವಿದೇಶಗಳಿಗೆ ರಫ್ತು ಮಾಡಲು ನೆರವಾಗುವುದು.

ರಾಷ್ಟ್ರಕ್ಕೆ ಪ್ರಥಮ ಗರಿ ಹಾಗೂ ಕೆಪೆಕ್‌ಗೆ ಪ್ರಥಮ

ಪಿಎಂಎಫ್‌ಎಂಇ ಯೋಜನೆಯಡಿ ಅತ್ಯುತ್ತಮ ಸಾಧನೆಗಾಗಿ ಕರ್ನಾಟಕ ರಾಜ್ಯವು ಕೇಂದ್ರ ಆಹಾರ ಸಂಸ್ಕರಣಾ ಉದ್ಯಮಗಳ ಸಚಿವಾಲಯದ ರಾಷ್ಟ್ರೀಯ ಪ್ರಶಸ್ತಿಗೆ ಪಾತ್ರವಾಗಿದೆ. ಇದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು, ಕೃಷಿ ಸಚಿವರು ಹಾಗೂ ಕೆಪೆಕ್ ಸಂಸ್ಥೆಯ ಅಧಿಕಾರಿಗಳನ್ನು ಪ್ರಶಂಸಿಸಿದ್ದಾರೆ.

ಸಂಜೀವಿನಿಯಾದ ಪಿಎಂಎಫ್‌ಎಂಇ

ಪಿಎಂಎಫ್‌ಎಂಇ ಯೋಜನೆಯು ಉಕ್ಕಾಂತರ ರೈತರಿಗೆ ಸಂಜೀವಿನಿಯಾಗಿದೆ. 15 ಲಕ್ಷ ರೂಪಾಯಿವರೆಗೆ ಸಹಾಯಧನ. ಹಾಂಕಿಕ ತರಬೇತಿ ಮತ್ತು ಮಾರುಕಟ್ಟೆ ಮಾರ್ಗದರ್ಶನ ನೀಡುವ ಮೂಲಕ ನವೋದ್ಯಮಿಗಳ ಕನಸಿಗೆ ರೆಕ್ಕೆ ಬಿಚ್ಚಿಕೊಟ್ಟಿದೆ.

ರೈತೋದ್ಯಮಿಗಳ ಬೆಳವಣಿಗೆಗೆ ಪೂರಕವಾದ ಪಿಎಂಎಫ್‌ಎಂಇ ಯೋಜನೆಯಡಿ ದೇಶದಲ್ಲಿಯೇ ಅತ್ಯಂತ ಹೆಚ್ಚಿನ ಸಂಖ್ಯೆಯ ಸಾಮಾನ್ಯ ಇನ್‌ಕ್ಯುಬೇಷನ್ ಕೇಂದ್ರಗಳನ್ನು ಸ್ಥಾಪಿಸುವಲ್ಲಿ ಕೆಪೆಕ್ ಸಂಸ್ಥೆ ಗುರುತರ ಪಾತ್ರ ವಹಿಸಿದೆ. ರೈತರಿಗೆ ನೆರವಾಗಲೆಂದೇ ಮೈದಳೆದಿರುವ ಈ ಕೇಂದ್ರಗಳಲ್ಲಿ ಹಣ್ಣು, ತರಕಾರಿಗಳು, ಸಿರಿಧಾನ್ಯಗಳು ಮತ್ತು ಸಂಬಾರು ಪದಾರ್ಥಗಳು ಸೇರಿದಂತೆ ಎಲ್ಲ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಮೌಲ್ಯವರ್ಧನೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ರೈತರು ಮತ್ತು ನವೋದ್ಯಮಿಗಳಿಗೆ ಈ ಕೇಂದ್ರಗಳು ಮಾರ್ಗದರ್ಶಕವಾಗಿವೆ. ಕಳೆದ ಎರಡು ವರ್ಷಗಳಲ್ಲಿ ರಾಜ್ಯದಾದ್ಯಂತ ಪಿಎಂಎಫ್‌ಎಂಇ ಯೋಜನೆಯ ಮೂಲಕ ಸಾವಿರಾರು ಸೂಕ್ಷ್ಮ ಮತ್ತು ಮಧ್ಯಮ ವರ್ಗದ ರೈತರನ್ನು ಸ್ವಯ-ನವೋದ್ಯಮಿಗಳನ್ನಾಗಿ ಮಾಡಿದೆ.



ರಫ್ತಿಗೆ ಉತ್ತೇಜನ

ಅಂದ ಹಾಗೆ, ಕೆಪೆಕ್ ಸಂಸ್ಥೆಯು ರಫ್ತು ಮಾಡುವವರಿಗೆ ಉತ್ತೇಜನ ನೀಡುವ ಸರಕಾರಿ ಸಂಸ್ಥೆಯಾಗಿದೆ. ರಫ್ತು ಹುಟ್ಟು ಯಾವೆಲ್ಲ ಕ್ರಮಗಳನ್ನು ಅನುಸರಿಸಬೇಕು? ಗುಣಮಟ್ಟದ ಉತ್ಪನ್ನಗಳೆ ಮಾರುವುದು ಹೇಗೆ? ರಫ್ತು ಹುಟ್ಟಾದ ನೀತಿ-ನಿಯಮಗಳೇನು ಎಂಬುದನ್ನು ತಿಳಿಸಿ ಮೂಲಕ ತಿಳಿಸಲಾಗುತ್ತದೆ.

ಕೊರೊನಾ ನಂತರ ಕೃಷಿ ಉತ್ಪನ್ನಗಳನ್ನು ಸಂಸ್ಕರಣೆ ಮಾಡುವುದು, ನಂತರ ರಫ್ತು ಮಾಡುವುದು ಹಾಗೂ ಕೃಷಿ ಸಂಸ್ಕರಣ ಚಟುವಟಿಕೆಗಳನ್ನು ಕೈಗೊಳ್ಳಲು ಕೆಪೆಕ್ ಉತ್ತೇಜನ ನೀಡುತ್ತಿದೆ. ಸಂಪ್ರೆಯ ಕರ್ನಾಟಕ ಸರಕಾರವು ನಿಗಮವಾಗಿದ್ದು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕೃಷಿ ಉತ್ಪನ್ನಗಳನ್ನು ಸಂಗ್ರಹಿಸಲು ಎಂಟು ಶೀತಲಗೃಹಗಳನ್ನು ಸ್ಥಾಪಿಸಲಾಗಿದೆ. ಜೊತೆಗೆ, ಉಗ್ರಾಣಗಳ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ. ರಫ್ತು ಮತ್ತು ಸಂಸ್ಥಾಕ ಹಂತದ ತಟಿಬಟಿಕೆಗಳ ಸೂರ್ತಿ ಬಜೆಸ್ಟಿಯಾಗಿ ಕೆಪೆಕ್ ಕಾರ್ಯನಿರ್ವಹಿಸುತ್ತಿದೆ. ಶಿಡಲಗ್ರಹಗಳು ಮತ್ತು ಉಗ್ರಾಣಗಳನ್ನು ಆಗತ್ಯನಿರುವವರಿಗೆ ಕಿರಿಮ ದರದಲ್ಲಿ ಬಾಡಿಗೆ ಆಧಾರದಲ್ಲಿ ನೀಡಲಾಗುತ್ತದೆ.



ಆರೋಗ್ಯಕ್ಕೂ ಒತ್ತು

ಕೆಪೆಕ್ ಜನರ ಸ್ವಾಸ್ಥ್ಯ ರಕ್ಷಣೆಗೂ ಹೆಚ್ಚಿನ ಒತ್ತು ನೀಡಿದೆ. ಪಿಎಂಎಫ್‌ಎಂಇ ಯೋಜನೆಯ ಮೂಲಕ ಸಿರಿಧಾನ್ಯಗಳ ಸಂಸ್ಕರಣೆ, ಗಾಣದ ಎಣ್ಣೆ ಸಾದಯ ಚಿಲ್ಲರೆಯಂತಹ ಪರಂಪರೆಯಾಗಿ ಹೆಚ್ಚಿಕಾಲಯಯುತ್ತ ಆಹಾರ ಸಂಸ್ಕರಿಸುವ ಘಟಕಗಳ ಸ್ಥಾಪನೆಗೆ ಹೆಚ್ಚಿನ ಒತ್ತು ನೀಡಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಪ್ರಸ್ತುತ ಪಿಎಂಎಫ್‌ಎಂಇ ಯೋಜನೆಯಡಿ ರಾಜ್ಯದಾದ್ಯಂತ 1,000ಕ್ಕೂ ಹೆಚ್ಚು ಸಿರಿಧಾನ್ಯ ಸಂಸ್ಕರಣಾ ಘಟಕಗಳು ಆರಂಭವಾಗಿವೆ. ಸಾವಿರಾರು ಎಣ್ಣೆ ತೆಗೆಯುವ ಗಾಣಗಳು ಸ್ಥಾಪನೆಯಾಗಿವೆ. ರಾಸಾಯನಿಕಮುಕ್ತ ಬೆಲ್ಲ ಉತ್ಪಾದಿಸುವ 300 ಘಟಕಗಳು ಪ್ರಾರಂಭವಾಗಿವೆ. ಭವಿಷ್ಯದಲ್ಲಿ ಪ್ರತಿ ಗ್ರಾಮ ಪಂಚಾಯತ್‌ನಲ್ಲಿ ಕನಿಷ್ಠ ಒಂದಾದರೂ ಬೆಲ್ಲದ ಉತ್ಪಾದನಾ ಘಟಕ ಹಾಗೂ ಗಾಣದ ಎಣ್ಣೆ ಘಟಕಗಳು ಆರಂಭವಾಗಬೇಕೆಂಬುದು ಕೆಪೆಕ್‌ನ ಗುರಿಯಾಗಿದೆ.

ಸಂಪನ್ಮೂಲ ವ್ಯಕ್ತಿಗಳ ನೇಮಕ

ಕಳೆದ ಐದು ವರ್ಷಗಳಲ್ಲಿ ಕೆಪೆಕ್ ಮೂಲಕ ಸುಮಾರು 10,500ಕ್ಕೂ ಹೆಚ್ಚು ನವೀನ ಆಹಾರ ಉದ್ಯಮಿಗಳು ಪಿಎಂಎಫ್‌ಎಂಇ ಯೋಜನೆಯಡಿ ಸಾಲ, ಸಹಾಯಧನ ಹಾಗೂ ಮಾರ್ಗದರ್ಶನ ಪಡೆದುಕೊಂಡು 50 ಸಾವಿರಕ್ಕೂ ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸಿದ್ದಾರೆ. ಈ ಉದ್ಯಮಿಗಳಲ್ಲಿ ಮಹಿಳಾ ಉದ್ಯಮಿಗಳ ಸಂಖ್ಯೆ ಹೆಚ್ಚಿದೆ. ಆಹಾರ ಸಂಸ್ಕರಣೆ ಕ್ಷೇತ್ರದಲ್ಲಿ ಉದ್ಯಮ ಆರಂಭಿಸುವವರಿಗೆ ನೆರವಾಗಿರುವುದಷ್ಟೇ ಅಲ್ಲದೆ ಕೆಪೆಕ್ ಪ್ರಾದ ಎಲ್ಲ ಜಿಲ್ಲೆಗಳಲ್ಲೂ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳನ್ನು ನೇಮಕ ಮಾಡಿದೆ. ಅವರು ಉದ್ಯಮ ಆರಂಭಿಸುವವರಿಗೆ ಎಲ್ಲ ಮಾಹಿತಿಗಳನ್ನೂ ನೀಡುತ್ತಾರೆ.

ಕೃಷಿ ಆಲಾಬೆಯ ವ್ಯಾಪ್ತಿಯಲ್ಲಿರುವ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮ ನಿಯಮಿತ (ಕೆಪೆಕ್) ಆಡಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ 'ಪಿಎಂಎಫ್‌ಎಂಇ' ಯೋಜನೆಯನ್ನು ಬಳಸಿಕೊಂಡು ರೈತರು ಸ್ವತಃ ಉದ್ಯಮಿಗಳಾಗಬೇಕು. ತಾವು ಬೆಳೆದ ಹಾಗೂ ಸುತ್ತಮುತ್ತಲಿನ ರೈತರು ಬೆಳೆದ ಬೆಳೆಗಳನ್ನು ಮೌಲ್ಯವರ್ಧಿಸಿ, ಮೌಲ್ಯಯುತ ಉತ್ಪನ್ನಗಳನ್ನಾ ಮಾಡಿ, ಸ್ವಂತ ಬ್ರಾಂಡ್ ನಿರ್ಮಿಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುವಂತಾಗಬೇಕು. ಇಂತಹ ಎಲ್ಲ ಪ್ರಯತ್ನಗಳಿಗೆ ಕೆಪೆಕ್ ಬೆನ್ನೆಲುಬಾಗಿ ನಿಲ್ಲಲಿದೆ.

ರಾಜ್ಯ ಸರಕಾರವು ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ಮೌಲ್ಯವರ್ಧನೆಗೆ ನಿರಂತರವಾಗಿ ಬೆಂಬಲ ನೀಡುತ್ತಿದೆ. ಪಿಎಂಎಫ್‌ಎಂಇ ಯೋಜನೆಯ ಅನುಷ್ಠಾನವು ತೀವ್ರ ವೇಗ ಪಡೆದುಕೊಂಡಿದೆ. ಈ ಯೋಜನೆಯಡಿ ಗ್ರಾಮೀಣ ಮಹಿಳೆಯರು ಹಾಗೂ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯಮಿಗಳಾಗುತ್ತಿದ್ದಾರೆ. ಇದನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಜಾರಿಗೆ ತರಲಾಗುವುದು.

-ಪಿ.ಎಂ. ನರೇಂದ್ರಸ್ವಾಮಿ ಕೃಷಿ ಸಚಿವರು



ರೈತೋದ್ಯಮಿಗಳ ಬೆಳವಣಿಗೆಗೆ ಪೂರಕವಾದ ಪಿಎಂಎಫ್‌ಎಂಇ ಯೋಜನೆಯಡಿ ದೇಶದಲ್ಲಿಯೇ ಅತ್ಯಂತ ಹೆಚ್ಚಿನ ಸಂಖ್ಯೆಯ ಸಾಮಾನ್ಯ ಇನ್‌ಕ್ಯುಬೇಷನ್ ಕೇಂದ್ರಗಳನ್ನು ಸ್ಥಾಪಿಸುವಲ್ಲಿ ಕೆಪೆಕ್ ಸಂಸ್ಥೆ ಗುರುತರ ಪಾತ್ರ ವಹಿಸಿದೆ. ರೈತರಿಗೆ ನೆರವಾಗಲೆಂದೇ ಮೈದಳೆದಿರುವ ಈ ಕೇಂದ್ರಗಳಲ್ಲಿ ಹಣ್ಣು, ತರಕಾರಿ, ಸಿರಿಧಾನ್ಯಗಳು ಮತ್ತು ಸಂಬಾರು ಪದಾರ್ಥಗಳು ಸೇರಿದಂತೆ ಎಲ್ಲ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಮೌಲ್ಯವರ್ಧಿತ ಉತ್ಪನ್ನಗಳನ್ನು ಸಿದ್ಧಪಡಿಸಲು ಅವಕಾಶ ಕಲ್ಪಿಸಲಾಗಿದೆ.

ಪ್ರಗತಿಪರ ರೈತರು, ರೈತ ಉದ್ಯಮದಾರರು ಮತ್ತು ಆಹಾರ ಸಂಸ್ಕರಣಾ ಉದ್ಯಮದಾರರಿಗೆ 15 ಲಕ್ಷ ರೂಪಾಯಿವರೆಗೂ ಸಹಾಯಧನ ನೀಡಲಾಗುತ್ತಿದೆ. ಕಳೆದ ಎರಡು ವರ್ಷಗಳಲ್ಲಿ ನಾವು ಐದು ಸಾವಿರ ಘಟಕಗಳ ಸ್ಥಾಪನೆಗೆ ನೆರವಾಗಿರುವುದು ದಾಖಲೆಯಾಗಿದೆ. ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಉದ್ಯಮದಾರರನ್ನು ಸೃಷ್ಟಿಸುವಲ್ಲಿ ಹಾಗೂ ಉತ್ತೇಜಿಸುವಲ್ಲಿ ಇದು ಮಹತ್ವದ ಮತ್ತು ಗಮನಾರ್ಹ ಬೆಳವಣಿಗೆಯಾಗಿದೆ.

-ಬಿ.ಎಚ್. ಹರೀಶ್ ಅಧ್ಯಕ್ಷರು, ಕೆಪೆಕ್



ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವೈವಿಧ್ಯಮಯ ಕೃಷಿ ಮತ್ತು ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದ್ದು, ಅವುಗಳಿಗೆ ಸ್ಥಳೀಯ ವಾಣಿಜ್ಯ ಮಹತ್ವವಿರುವ ಬೆಳೆಗಳ ಸಂಸ್ಕರಣೆಯೊಂದಿಗೆ ಬ್ರಾಂಡ್ ಮಾಡಿ ಮಾರುಕಟ್ಟೆ ವಿದಗಿಸುವ ಕಾರ್ಯವನ್ನು ಕೆಪೆಕ್ ಮಾಡುತ್ತಿದೆ. ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆಯನ್ನು ಗುರಿಯಾಗಿಸಿಕೊಂಡು, ಪಿಎಂಎಫ್‌ಎಂಇ ಯೋಜನೆಯಡಿ ಗರಿಷ್ಠ ಸಂಖ್ಯೆಯಲ್ಲಿ ಸಾಮಾನ್ಯ ಇನ್‌ಕ್ಯುಬೇಷನ್ ಕೇಂದ್ರಗಳನ್ನು (ಸಿಐಸಿ) ಸ್ಥಾಪಿಸಲು ದೃಢ ಕ್ರಮ ಕೈಗೊಳ್ಳಲಾಗಿದೆ.

-ವೆಂಕಟರಾಮರೆಡ್ಡಿ ಜಿ. ಪಾಟೀಲ್ ವ್ಯವಸ್ಥಾಪಕ ನಿರ್ದೇಶಕರು, ಕೆಪೆಕ್



ರೈತರು, ನವೋದ್ಯಮಿಗಳು ಹಾಗೂ ಮಹಿಳೆಯರು ಆಹಾರ ಉದ್ಯಮಿಗಳಾಗಬೇಕು. ಹೆಚ್ಚು ಹೆಚ್ಚು ಉದ್ಯಮದಾರರು ಆಹಾರ ಸಂಸ್ಕರಣಾ ಉದ್ಯಮ ಪ್ರವೇಶಿಸಬೇಕು ಎಂಬ ಆಶಯದೊಂದಿಗೆ ಕೆಪೆಕ್ ಕಾರ್ಯನಿರ್ವಹಿಸುತ್ತಿದೆ.

- ಡಾ. ಹೆಚ್.ಕೆ. ಶಿವಕುಮಾರ್ ಪ್ರಧಾನ ವ್ಯವಸ್ಥಾಪಕರು, ಕೆಪೆಕ್

ಸಹಾಯಧನದಲ್ಲಿ ರಾಜ್ಯವೇ ಮುಂಚೂಣಿ

1996ರಲ್ಲಿ ಸರಕಾರದ ಕೃಷಿ ಸಚಿವಾಲಯದಡಿ ಆರಂಭವಾದ ಕೆಪೆಕ್ ಸಂಸ್ಥೆಯು ಕೃಷಿ, ತೋಟಗಾರಿಕೆ, ಹೂವು ಮತ್ತು ಸಂಬಂಧಿತ ಉತ್ಪನ್ನಗಳ ಉತ್ಪಾದನೆ, ಸಂಸ್ಕರಣೆ ಹಾಗೂ ರಫ್ತನ್ನು ಪ್ರೋತ್ಸಾಹಿಸುತ್ತದೆ. ಆರು ವರ್ಷಗಳಿಂದ 'ಆತ್ಮನಿರ್ಭರ ಭಾರತ' ಯೋಜನೆಯಡಿ ರಾಜ್ಯದಲ್ಲಿ ಪಿಎಂಎಫ್‌ಎಂಇ ಯೋಜನೆಯನ್ನು ಅನುಷ್ಠಾನಗೊಳಿಸುವ ನೋಡಲ್ ಏಜೆನ್ಸಿಯಾಗಿ ಕೆಲಸ ಮಾಡುತ್ತಿದೆ.

ಈ ಯೋಜನೆಯು ಆಹಾರ ಸಂಸ್ಕರಣೆಯ ನವೋದ್ಯಮಕ್ಕೆ ಹೊಸ ರೂಪವನ್ನೇ ನೀಡುತ್ತಾ ಬಂದಿದೆ. ಕೆಪೆಕ್‌ನ ಪಿಎಂಎಫ್‌ಎಂಇ ಯೋಜನೆಯು ಕೇಂದ್ರ ಮತ್ತು ರಾಜ್ಯ ಸರಕಾರದ ಸಹಭಾಗಿತ್ವದ ಯೋಜನೆಯಾಗಿದೆ. ಕಿರು ಆಹಾರ ಉತ್ಪನ್ನಗಳ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಪೂರಕವಾಗಿ ಹಾಗೂ ಆಗತ್ಯ ನೆರವು ನೀಡುವುದು ಈ ಯೋಜನೆಯ ಉದ್ದೇಶ.

ಹೊಸದಾಗಿ ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಬಯಸುವ ನವೋದ್ಯಮಿಗಳ ಪಾಲಿಗೆ ಈ ಯೋಜನೆ ನಿಜಕ್ಕೂ ಸಂಜೀವಿನಿಯಾಗಿದೆ. ಪಗತಿಪರ ರೈತರು, ರೈತ ಉತ್ಪಾದಕ ಸಂಸ್ಥೆಗಳು, ನವೋದ್ಯಮಿಗಳು ಮತ್ತು ಸ್ವಸಹಾಯ ಸಂಘಗಳಿಗೆ ವರದಾನವಾಗಿರುವ ಈ ಯೋಜನೆಯಡಿ ಆರ್ಥ ಫಲಾನುಭವಿಗಳಿಗೆ ಕೆಪೆಕ್ ಸಂಸ್ಥೆಯು ಶೇ. 50ರಷ್ಟು ಸಹಾಯಧನ ನೀಡುವುದು ವಿಶೇಷ. ಈ ಸಹಾಯಧನವು ಗರಿಷ್ಠ 15 ಲಕ್ಷ ರೂ. ವರೆಗೂ ಇದೆ.

ಈ ಯೋಜನೆಯಡಿ ದೊರೆಯುವ ನೆರವಿನಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರದ ಪಾಲು ಕ್ರಮವಾಗಿ ಶೇ. 60 ಮತ್ತು ಶೇ. 40ರಷ್ಟಿದೆ. ವಿಶೇಷವೆಂದರೆ, ರಾಜ್ಯ ಸರಕಾರ ಹೆಚ್ಚುವರಿಯಾಗಿ ಐದು ಲಕ್ಷ ರೂಪಾಯಿಗಳನ್ನು ಫಲಾನುಭವಿಗಳಿಗೆ ನೀಡುತ್ತಿದೆ. ಇದರಿಂದಾಗಿ ಯೋಜನೆಯಡಿ ದೊರೆಯುವ ಸಹಾಯಧನದ ಮೊತ್ತವನ್ನು ರಾಜ್ಯದ್ದೇ ಮೇಲುಗೈ ಆಗಿದೆ.

15 ಲಕ್ಷ ರೂ. ಸಹಾಯಧನದಲ್ಲಿ ರಾಜ್ಯ ಸರಕಾರವು 9 ಲಕ್ಷ ರೂಪಾಯಿ ನೀಡಿದರೆ, ಕೇಂದ್ರದ ಪಾಲು 6 ಲಕ್ಷ ರೂಪಾಯಿಯಾಗಿದೆ. ಹೆಚ್ಚುವರಿ ಸಹಾಯಧನ ನೀಡುವ ರಾಜ್ಯ ಸರಕಾರದ ಈ ಕ್ರಮವು ಸರಕಾರದ ರೈತಪರ ಕಾಳಜಿಗೆ ಹಿಡಿದುರುಹಾಗಿದೆ. ಹೊಸದಾಗಿ ಆಹಾರ ಉದ್ಯಮ ಸ್ಥಾಪಿಸಲು ಆಸಕ್ತಿ ಹೊಂದಿರುವವರು ಅಥವಾ ಈಗಾಗಲೇ ಆಹಾರ ಉದ್ಯಮದಲ್ಲಿ ತೊಡಗಿಸಿಕೊಂಡಿರುವವರು ಆದನ್ನು ಮೇಲ್ದರ್ಜೆಗೇರಿಸಲು ಈ ಯೋಜನೆಯನ್ನು ಬಳಸಿಕೊಳ್ಳಬಹುದು.



ಆರ್ಜಿ ಸಲ್ಲಿಸಲು ಸಂಪರ್ಕಿಸುವ ವಿಳಾಸ

ಆರ್ಜಿ ಸಲ್ಲಿಕೆಗೆ ರಾಜ್ಯದ ಆಯಾ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರ ಕಚೇರಿ, ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳು ಹಾಗೂ ಕೆಪೆಕ್ ಸಂಸ್ಥೆಯ ಯೋಜನಾ ನಿರ್ದೇಶಕರ ಘಟಕಗಳನ್ನು ಸಂಪರ್ಕಿಸಬಹುದು.

- ಕೆಪೆಕ್‌ನ ಯೋಜನೆಗಳು, ಉದ್ಯಮ ಆರಂಭಿಸಲು ಸಹಾಯಧನ ಪಡೆಯುವುದು ಸೇರಿದಂತೆ ವಿವಿಧ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು: **7618786813/14** ರಿಂದ **18**ರವರೆಗೆ, **080-2227 1192/93/96/97**
- ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ, ನಂ.17, ಬಸರಲ್ ಕೆ.ಎಸ್. ತಿಮ್ಮಯ್ಯ ರಸ್ತೆ (ರಿಚ್ಮಂಡ್ ರಸ್ತೆ) ಬೆಂಗಳೂರು-25.



ಮುಖ್ಯಾಂಶಗಳು

- ಉದ್ಯಮ ಸ್ಥಾಪನೆಯ ಜತೆಗೆ ಜನರ ಸ್ವಾಸ್ಥ್ಯ ರಕ್ಷಣೆಗೆ ಕೆಪೆಕ್ ವಿಶೇಷ ಒತ್ತು ನೀಡಿದೆ.
- 2,000ಕ್ಕೂ ಹೆಚ್ಚು ಸಿರಿಧಾನ್ಯ ಸಂಸ್ಕರಣಾ ಘಟಕಗಳು.
- 1,000ಕ್ಕೂ ಹೆಚ್ಚು ಆಡುಗಿ ಎಣ್ಣೆ ಗಾಣಗಳು.
- 300ಕ್ಕೂ ಹೆಚ್ಚು ರಾಸಾಯನಿಕಮುಕ್ತ ಸಾವಯವ ಬೆಲ್ಲದ ಘಟಕಗಳು ಯಶಸ್ವಿಯಾಗಿ ಆರಂಭವಾಗಿವೆ.
- ಪ್ರತಿಯೊಂದು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲೂ ಗಾಣದ ಎಣ್ಣೆ ಹಾಗೂ ಸಾವಯವ ಬೆಲ್ಲದ ಘಟಕಗಳನ್ನು ಸ್ಥಾಪಿಸುವುದು ಕೆಪೆಕ್‌ನ ಮುಂದಿನ ಗುರಿಯಾಗಿದೆ.
- ಯೋಜನೆಯಡಿ ಉತ್ಪನ್ನವಾರು ಸ್ಥಾಪಿಸಿದ ಘಟಕಗಳ ಸಂಖ್ಯೆ

ಯಾರೆಲ್ಲಾ ಆರ್ಥಿಕ ನೆರವು ಪಡೆಯಬಹುದು ?

- ಯೋಜನೆಯಡಿ ವೈಯಕ್ತಿಕ ಉದ್ಯಮದಾರರು, ಪಾಲುದಾರಿಕೆ ಸಂಸ್ಥೆಗಳು, ಖಾಸಗಿ ಕಂಪನಿಗಳು, ರೈತ ಉತ್ಪಾದಕ ಸಂಸ್ಥೆಗಳು, ಸ್ವಯಂಸಹಾಯ